**Government of Karnataka**
**(Water Resource Department)**

Subject: Administrative approval for revised Detailed Project Report of Shiggaon lift irrigation scheme which involves sprinkler and drip irrigation for Shiggaon Taluk, Haveri District.

Ref: 1. The Managing Director, Karnataka Neeravari Nigam Ltd, Letter No: KNN: Shiggaon: sprinkler+drip irrigation: 2012-13:5496:DATE.16.03.2013
2. Order no: WRD 98 MMB 2008 DATE.13.01.2009
3. Letter No: WRD 33 WBC 2009 DATE.27.03.2010

------------

PROPOSAL

Shiggaon Lift Irrigation Scheme is proposed to provide irrigation facility to drought prone areas and to provide drinking water for Shiggaon, Hangal and Savanur taluks as well as to fill the tanks and ponds in these areas to fulfill drinking water requirement in the region. To this end 1.5 TMC of water from Varada river will be utilized to provide irrigation facility to a total of 9900 ha in Shiggaon, Hangal and Savanur taluk. As per the order mentioned in ref (2) above, the project has been accorded administrative approval for the estimated cost of Rs 238.00 crores and for implementation of said scheme by Karnataka Neeravari Nigam Limited.

In the initial estimates, traditional canal based flow irrigation was approved, which was later revised vide reference (3) mentioned above to sprinkler irrigation and canals were to be replaced by pipes and the approval was granted for the same.

The use of sprinkler irrigation results in massive savings in the use of water, for instance in the use of sprinkler irrigation to supply 1.5 TMC of water to irrigate 9900 Ha of farmlands in 14 villages of Shiggaon taluk 8 villages of Savanur and Hangal taluks results in the usage of only 1 TMC, which results in savings of 0.5 TMC of water of which 0.35 TMC water used to irrigate an additional 3600 Ha lands during the Kharif season and the remaining 0.15 TMC of water which can be used to fill 17 tanks in Savanur and 1 tank in Hangal Taluk, which will be used to supply drinking water.

----2

Further it is proposed to construct a barrage of 0.516 TMC capacities and supply of water for irrigation during the Rabi season and drinking water for Shiggaon and Bankapura towns has been planned. The implementation of sprinkler and drip irrigation systems results in 71.25% and 86% efficiency in irrigation. To estimate the crop, penman method has been used by using data from IMD- Dharwad as the basis for information.

The cost estimate of Rs 532.00 Crores is worked out based on 2011-12 WRD/KPWD rate list. Under the same the B.C ratio comes to 1.17 and the cost per acre of command area comes to Rs 3.94 Lakhs.

This proposal along with the detailed project report and the cost estimates were discussed in the 144th technical subcommittee meeting held on 24.1.2013. The clarifications and concerns raised in the said meeting were incorporated and the revised estimates as well as the DPR were placed before the committee. The technical sub committee recommended examining the compliance report and revise certain details in the detailed project report, place the same before the Board of KNNL for its recommendation, obtain administrative approval from the Government and then submit the same to Central Water Commission.

The said project has already been agreed in principle by the Central Water Commission and hence it is instructed to submit the DPR as well as the estimates for necessary action.

The Managing Director, replying to the issue raised by the technical subcommittee has submitted the revised DPR as well as the revised estimate for Rs 532 Crores for approval. As per the recommendation of the technical subcommittee, after obtaining revised administrative approval, the subject will be placed before the Board of Directors, KNNL for consideration and onward submission to Central Water Commission to avail funding under the AIBP scheme.

----3

In the light of the same, the Managing Director, Karnataka Neeravari Nigam Limited has placed the revised DPR and estimates of the proposed Shiggaon lift irrigation scheme to irrigate parts of Haveri and Shiggaon taluks using sprinkler and drip irrigation, seeking administrative approval.

**<u>Govt. Order No: WRD 11 MMB 2013, Bangalore Date: 30.10.2013</u>**

The government hereby accords administrative approval for the cost estimates of Rs.532.00 Crores (Five hundred and thirty two Crores only) for Shiggaon lift irrigation scheme which incorporates sprinkler irrigation and drip irrigation for Shiggaon Taluk, Haveri District.

This order has been issued in accordance with the approval of the finance department vide its order no: PWD 211 FC-1/2013 Date 16.03.2013.

By and order in the name of
Governor of Karnataka

Sd/-
(C. Srinivasalu)
Under Secretary to the Government (Technical-1)
Water Resource Department

To

1. The Principal Accountant General, Karnataka, Bangalore.
2. The Accountant General (accounts 1 &2), New Building, Bangalore.
3. The Managing Director, Karnataka Neeravari Nigam Ltd, Coffee Board, Bangalore
4. Personal Secretary to the Chief Secretary (Cabinet Committee),Vidhana Soudha Bangalore, (Subject no: C.349/2013, dated 16.03.2013-reg).,
5. The Special Officer and Deputy Secretary to the Government, Finance Department (PWD, Treasury), Vidhana Soudha, Bangalore.
6. Guard file / additional copies.

# ಕರ್ನಾಟಕ ಸರ್ಕಾರದ ನಡವಳಿಗಳು

## (ಜಲಸಂಪನ್ಮೂಲ ಇಲಾಖೆ)

ವಿಷಯ :- ಹಾವೇರಿ ಜಿಲ್ಲೆ ಶಿಗ್ಗಾಂವಿ ತಾಲ್ಲೂಕಿನ ತುಂತುರು ಹಾಗೂ ಹನಿ ನೀರಾವರಿ ಯೋಜನೆ ಒಳಗೊಂಡ ಶಿಗ್ಗಾಂವಿ ಏತ ನೀರಾವರಿ ಯೋಜನೆಯ ಪರಿಷ್ಕೃತ ವಿವರವಾದ ಯೋಜನಾ ವರದಿ ಹಾಗೂ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:- 1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: KNN : Shiggon : Sprinkler + Drip Irrgn : 2012-13 : 5496 : ದಿ. 16.03.2013

2. ಆದೇಶ ಸಂಖ್ಯೆ: ಜಸಂಇ 98 ಎಂಎಂಬಿ 2008 ದಿ: 13.1.2009

3. ಪತ್ರ ಸಂಖ್ಯೆ: ಜಸಂಇ 33 ಡಬ್ಲ್ಯೂಬಿಸಿ 2009 ದಿ: 27.3.2010

-------

ಪ್ರಸ್ತಾವನೆ :-

ಶಿಗ್ಗಾಂವಿ ಏತ ನೀರಾವರಿ ಯೋಜನೆಯನ್ನು ಹಾವೇರಿ ಜಿಲ್ಲೆಯ ಶಿಗ್ಗಾಂವಿ, ಸವಣೂರು ಮತ್ತು ಹಾನಗಲ್ ತಾಲ್ಲೂಕುಗಳ ಬರಪೀಡಿತ ಕ್ಷೇತ್ರಗಳಿಗೆ ನೀರಾವರಿ ಒದಗಿಸಲು ಹಾಗೂ ಈ ವ್ಯಾಪ್ತಿಯಲ್ಲಿನ ಕೆರೆಗಳನ್ನು ಭರ್ತಿ ಮಾಡಿಸುವ ಮೂಲಕ ಕುಡಿಯುವ ನೀರಿನ ಪೂರೈಕೆಯನ್ನು ಪೂರೈಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ ವರದಾ ನದಿಯಿಂದ 1.50 ಟಿ.ಎಂ.ಸಿ. ನೀರು ಬಳಸಿಕೊಂಡು ಹಾನಗಲ್, ಸವಣೂರು ಮತ್ತು ಶಿಗ್ಗಾಂವ್ ತಾಲ್ಲೂಕುಗಳ ಒಟ್ಟು 9,900 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರಕಲಿದೆ. ಮೇಲೆ ಓದಲಾದ (2)ರ ಆದೇಶದಲ್ಲಿ ಸದರಿ ಯೋಜನೆಯ ರೂ. 238.00 ಕೋಟಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಮೂಲ ಅಂದಾಜಿನಲ್ಲಿ ಸಾಂಪ್ರದಾಯಿಕ ಕಾಲುವೆ ನೀರಾವರಿ ವ್ಯವಸ್ಥೆ ಹಾಗೂ ನಾಲಾ ಜಾಲಾ ವ್ಯವಸ್ಥೆ ಅನುಮೋದಿಸಲಾಗಿದ್ದು, ತದನಂತರ, ಮೇಲೆ ಓದಲಾದ (3)ರ ಪತ್ರದಲ್ಲಿ ಸದರಿ ನೀರಾವರಿ ವ್ಯವಸ್ಥೆಯನ್ನು ತುಂತುರು ನೀರಾವರಿ ಪದ್ಧತಿಗೆ ಬದಲಾಯಿಸಲು ಹಾಗೂ ನಾಲಾ ವ್ಯವಸ್ಥೆಗೆ ಪೈಪುಗಳ ಬಳಕೆ ಮಾಡಲು ಅನುಮೋದಿಸಲಾಗಿರುತ್ತದೆ.

ತುಂತುರು ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವ ಮೂಲಕ ನೀರಿನ ಬಳಕೆಯಲ್ಲಿ ಭಾರಿ ಮಿತವ್ಯಯತೆ ಸಾಧಿಸಬಹುದಾಗಿದೆ. ಈ ಪೈಕಿ, ಶಿಗ್ಗಾಂವ್ ತಾಲ್ಲೂಕಿನ 14 ಗ್ರಾಮಗಳಿಗೆ, ಸವಣೂರು ಮತ್ತು ಹಾನಗಲ್ ತಾಲ್ಲೂಕುಗಳ 8 ಗ್ರಾಮಗಳಿಗೆ ತುಂತುರು ನೀರಾವರಿ ಪದ್ಧತಿಯಿಂದ ಒಟ್ಟು 9,900 ಹೆಕ್ಟೇರ್ ಕ್ಷೇತ್ರಕ್ಕೆ 1.50 ಟಿ.ಎಂ.ಸಿ. ನೀರಿನ ಹಂಚಿಕೆಯಲ್ಲಿ 1.00 ಟಿ.ಎಂ.ಸಿ. ನೀರು ಬಳಕೆಯಾಗುವುದು. ಇದರಿಂದಾಗಿ 0.50 ಟಿ.ಎಂ.ಸಿ ನೀರಿನ ಉಳಿತಾಯ ಸಾಧ್ಯವಾಗಲಿದೆ. ಈ ಉಳಿತಾಯದ ನೀರಿನಲ್ಲಿ 0.35 ಟಿಎಂಸಿ ನೀರನ್ನು ಖರೀಫ್ ಹಂಗಾಮಿನಲ್ಲಿ ಹೆಚ್ಚುವರಿಯಾಗಿ 3,600 ಹೆ. ಪ್ರದೇಶಕ್ಕೆ ಹನಿ ನೀರಾವರಿ ಪದ್ಧತಿಯಿಂದ ಬಳಕೆ ಮಾಡಿಕೊಳ್ಳಲಾಗುತ್ತದೆ ಹಾಗೂ ಬಾಕಿ ಉಳಿದ 0.15 ಟಿ.ಎಂ.ಸಿ ನೀರನ್ನು ಶಿಗ್ಗಾಂವ್ ತಾಲ್ಲೂಕಿನ

---2

17 ಕೆರೆಗಳು ಹಾಗೂ ಹಾನಗಲ್ ತಾಲ್ಲೂಕಿನ 1 ಕೆರೆಯನ್ನು ತುಂಬಿಸಿ/ಭರ್ತಿ ಮಾಡಿ ಕುಡಿಯುವ ನೀರಿಗಾಗಿ ಬಳಸಿಕೊಳ್ಳಲಾಗುತ್ತದೆ. ಮುಂದುವರೆದು, ರಾಬಿ ಕೃಷಿಗಾಗಿ ಹಾಗೂ ಶಿಗ್ಗಾಂವ್ ಮತ್ತು ಬಂಕಾಪುರ ಪಟ್ಟಣಗಳ ಕುಡಿಯುವ ನೀರಿನ ಬಳಕೆಗಾಗಿ 0.516 ಟಿ.ಎಂ.ಸಿ. ಸಾಮರ್ಥ್ಯದ ಬ್ಯಾರೇಜು ನಿರ್ಮಿಸಲು ಉದ್ದೇಶಿಸಲಾಗಿದೆ ಹಾಗೂ ಶಿಗ್ಗಾಂವ್ ಹಾಗೂ ಬಂಕಾಪುರ ಪಟ್ಟಣಗಳ ಕುಡಿಯುವ ನೀರಿಗಾಗಿ ನಿಯಮಿತವಾಗಿ ನೀರಿನ ಬಿಡುಗಡೆ ಯೋಜಿಸಲಾಗಿದೆ.

ತುಂತುರು ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವಿಕೆಯಿಂದಾಗಿ ನೀರಾವರಿಯಲ್ಲಿ ಶೇಕಡಾ 71.25 ಕ್ಷಮತೆ ಹಾಗೂ ಹನಿ ನೀರಾವರಿ ಪದ್ಧತಿಯ ಬಳಕೆಯಿಂದ ಒಟ್ಟಾರೆ ಶೇಕಡಾ 86 ನೀರಾವರಿ ಕ್ಷಮತೆ ಸಾಧ್ಯವಾಗುವುದು. ಬೆಳೆ ನೀರು ಬೇಡಿಕೆಯ ವಿವರಗಳನ್ನು ಪ್ರತಿ ಬೆಳೆಗೆ ಪೆನ್‌ಮೆನ್ ಪದ್ಧತಿ ಹಾಗೂ ಧಾರವಾಡ ಐಎಂಡಿ ಹವಾಮಾನ ಕೇಂದ್ರ ಆಧಾರದ ಮೇಲೆ ಪರಿಗಣಿಸಲಾಗಿದೆ.

ರೂ. 532.00 ಕೋಟಿಗಳ ಅಂದಾಜು ಪಟ್ಟಿಯನ್ನು, 2011-12ನೇ ಸಾಲಿನ ಜಸಂಇ/ಕೆಪಿಡಬ್ಲ್ಯುಡಿ ದರಪಟ್ಟಿಯನ್ನು ಆಧರಿಸಿ ತಯಾರಿಸಲಾಗಿದೆ. ಇದರನ್ವಯ ಬಿ.ಸಿ.ಅನುಪಾತ 1.17ಗೆ ಬರುತ್ತದೆ. ನೀರಾವರಿ ಪ್ರದೇಶದ ಪ್ರತಿ ಎಕರೆಗೆ ರೂ.3.94 ಲಕ್ಷಗಳ ಖರ್ಚು ಬರುತ್ತದೆ.

ಸದರಿ ಯೋಜನೆಯ ಪರಿಷ್ಕೃತ ವಿವರವಾದ ಯೋಜನಾ ವರದಿ ಮತ್ತು ಅಂದಾಜನ್ನು ಈ ಮೇಲಿನ ಅವಕಾಶಗಳೊಂದಿಗೆ, ದಿ: 24.01.2013ರಂದು ನಡೆದ 144ನೇ ತಾಂತ್ರಿಕ ಉಪ ಸಮಿತಿಯ ಸಭೆಯಲ್ಲಿ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಎತ್ತಲಾದ ಆಕ್ಷೇಪಣೆಗಳಿಗೆ, ಪಾಲನೆಯನ್ನು ಅನುಸರಿಸಿ, ಸರಿಪಡಿಸಲಾದ ಅಂದಾಜು ಮತ್ತು ವಿವರವಾದ ಯೋಜನಾ ವರದಿಯನ್ನು ಮತ್ತೊಮ್ಮೆ ಸಭೆಯಲ್ಲಿ ಮಂಡಿಸಲಾಗಿತ್ತು. ತಾಂತ್ರಿಕ ಉಪ ಸಮಿತಿಯು ಪಾಲನಾ ವರದಿಯನ್ನು ಪರಿಶೀಲಿಸಿ, ಯೋಜನಾ ವರದಿಯಲ್ಲಿ, ಕೆಲವು ತಿದ್ದುಪಡಿಗಳನ್ನು ಸೂಚಿಸಿ, ಸದರಿ ಪರಿಷ್ಕೃತ ಯೋಜನಾ ವರದಿಯನ್ನು ತಿದ್ದುಪಡಿಗಳೊಂದಿಗೆ, ಅನುಮೋದನೆಗಾಗಿ ಕರ್ನಾಟಕ ನೀರಾವರಿ ನಿಗಮದ ಮಂಡಳಿಯ ಮುಂದೆ ಮಂಡಿಸಲು ಶಿಫಾರಸ್ಸು ಮಾಡಿ, ಸರ್ಕಾರದ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ನಂತರ, ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸುವಂತೆ ಸೂಚಿಸಿರುತ್ತದೆ.

ಸದರಿ ಯೋಜನೆಗೆ, ಈಗಾಗಲೇ ಕೇಂದ್ರ ಜಲ ಆಯೋಗವು ತಾತ್ವಿಕ ಒಪ್ಪಿಗೆಯನ್ನು ನೀಡಿದ್ದು, ಯೋಜನೆಯ ಸಮಗ್ರ ವಿವರವಾದ ಯೋಜನಾ ವರದಿಯನ್ನು ಮತ್ತು ಅಂದಾಜನ್ನು ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ ಸಲ್ಲಿಸುವಂತೆ ಸೂಚಿಸಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು ಸಮಿತಿಯ ಎಲ್ಲಾ ಆಕ್ಷೇಪಣೆಗಳಿಗೆ ಉತ್ತರವನ್ನು ಸಲ್ಲಿಸುತ್ತಾ, ಪರಿಷ್ಕೃತ ವಿವರವಾದ ಯೋಜನಾ ವರದಿಯನ್ನು ಮತ್ತು ರೂ. 532.00 ಕೋಟಿಗಳ ಅಂದಾಜನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ತಾಂತ್ರಿಕ ಉಪ ಸಮಿತಿ ಸಭೆಯ ಶಿಫಾರಸ್ಸಿನಂತೆ, ಪರಿಷ್ಕೃತ ವಿವರವಾದ ಯೋಜನಾ ವರದಿ ಮತ್ತು ಅಂದಾಜಿಗೆ ಸರ್ಕಾರದ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ನಂತರ, AIBP ಅಡಿಯಲ್ಲಿ ನೆರವನ್ನು ಪಡೆಯಲು, ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲು ಕರ್ನಾಟಕ ನೀರಾವರಿ ನಿಗಮದ ಮಂಡಳಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗುವುದು.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ತುಂತುರು ಮತ್ತು ಹನಿ ನೀರಾವರಿ ಯೋಜನೆ ಒಳಗೊಂಡ, ಶಿಗ್ಗಾಂವ್ ಏತ ನೀರಾವರಿ ಯೋಜನೆಯ ರೂ. 532.00 ಕೋಟಿಗಳ ಪರಿಷ್ಕೃತ ವಿವರವಾದ ಯೋಜನಾ ವರದಿ ಮತ್ತು ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 11 ಎಂಎಂಐ 2013**

**ಬೆಂಗಳೂರು, ದಿನಾಂಕ : 30.10.2013**

ಹಾವೇರಿ ಜಿಲ್ಲೆಯ, ಶಿಗ್ಗಾಂವಿ ತಾಲ್ಲೂಕಿನ ತುಂತುರು ಮತ್ತು ಹನಿ ನೀರಾವರಿ ಯೋಜನೆ ಒಳಗೊಂಡ, ಶಿಗ್ಗಾಂವ್ ಏತ ನೀರಾವರಿ ಯೋಜನೆಯ ರೂ. 532.00 ಕೋಟಿಗಳ (ಐದು ನೂರಾ ಮುವ್ವತ್ತೆರಡು ಕೋಟಿ ರೂಪಾಯಿಗಳು ಮಾತ್ರ) ಮೊತ್ತದ ಪರಿಷ್ಕೃತ ವಿವರವಾದ ಯೋಜನಾ ವರದಿ ಮತ್ತು ಅಂದಾಜು ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಲೋಇ 211 ಆಕೋ-1/2013, ದಿ. 16.0.2013ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

31/10/13
(ಸಿ. ಶ್ರೀನಿವಾಸಲು)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-1),
ಜಲ ಸಂಪನ್ಮೂಲ ಇಲಾಖೆ

ಇವರಿಗೆ :-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು, (ಲೆಕ್ಕಪತ್ರ 1 ಮತ್ತು 2) ಹೊಸಕಟ್ಟಡ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ), ವಿಷಯ ಸಂ: ಸಿ. 349/2013, ದಿ: 16.03.2013 ರ ಅನ್ವಯ.
5. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಲೋ.ಇ, ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.